ನ್ಯೂ ಅಪೊಸ್ಟಾಲಿಕ್ ಚರ್ಚ್
ಇಂಡಿಯಾ

# ಕೃತಜ್ಞತಾರ್ಪಣೆ 2024

ಆತ್ಮೀಯ ಸಹೋದರ ಸಹೋದರಿಯರೇ,

ನಾವು ಬೆಳೆಯುವ ಸಮಯದಲ್ಲಿ, ನಮಗೇನಾದರೂ ಕೊಡಲಾದಾಗ "ವಂದನೆ" ಹೇಳಲು ನಮ್ಮ ತಂದೆ ತಾಯಿಂದರು ನಮಗೆ ಕಲಿಸಿಕೊಟ್ಟರು. ಈ ಮೂಲಕ ನಾವು ಹೊಂದಿರುವ ವಸ್ತುವಿಗಾಗಿ ಮೆಚ್ಚಿಗೆ ವ್ಯಕ್ತಪಡಿಸುವುದನ್ನೂ ಮತ್ತು ಅದಕ್ಕೆ ಮಹತ್ವ ನೀಡುವುದನ್ನೂ ಕಲಿಸಲು ಅವರು ಪ್ರಯತ್ನಿಸಿದರು. ವೇಗ ಗತಿಯಿಂದ ಮುಂಸಾಗುತ್ತಿರುವ ಈ ಜಗತ್ತಿನಲ್ಲಿ, ನಾವು, ಒಂದು ವಾರದಿಂದ ಮತ್ತೊಂದು ವಾರಕ್ಕೆ ಹಾಗು ಒಂದು ಘಟನೆಯಿಂದ ಮತ್ತೊಂದು ಘಟನೆಯ ಕಡೆಗೆ ಮುಂದೆ ಸಾಗುತ್ತೇವೆ. ಈ ಕ್ಷಣಗಳನ್ನು ಸವಿಯಲು, ಅನುಭವಗಳ ಕುರಿತು ಚಿಂತನೆ ಮಾಡಲು, ಮತ್ತು ಅತಿ ಚಿಕ್ಕದಾದರೂ ಸರಿ, ನಮ್ಮ ಹತ್ತಿರ ಇರುವಂಥ ಅವಕಾಶಗಳನ್ನು ನಿಜವಾಗಲೂ ಪ್ರಶಂಸಿಸಲು ನಾವು ಸಮಯವೇ ತೆಗೆದುಕೊಳ್ಳುವುದಿಲ್ಲ ಎಂದೆನಿಸುತ್ತದೆ.

ನಾವು ಅಕ್ಟೋಬರ್ 6, 2024, ಭಾನುವಾರದಂದು ನಮ್ಮ ಸಭೆಯ ಕೃತಜ್ಞತಾರ್ಪಣೆಯ ದಿನವನ್ನು ಸಮೀಪಿಸುತ್ತಿರುವಾಗ, ನಾವು ಸಮಯ ತೆಗೆದುಕೊಂಡು ದೇವರು ಮಾಡಿರುವ ಮಹತ್ತಾದ ಕಾರ್ಯಗಳು ಹಾಗು ಅದ್ಭುತಗಳ ಕುರಿತು ಚಿಂತನೆ ಮಾಡೋಣ (1 ಪೂರ್ವಕಾಲ 16: 12). ದೇವರು ನಮಗೆ ಈ ಜೀವನವನ್ನು ಕೊಟ್ಟಿದ್ದಾನೆ; ನಾವಾತನ ಸೃಷ್ಟಿಯ ಅಂಗವಾಗಿದ್ದೇವೆ. ದೇವರೇ ಕರ್ತನಾಗಿದ್ದಾನೆ ಮತ್ತು ಆತನು ತನ್ನ ಸೃಷ್ಟಿಯನ್ನು ಪೋಷಿಸುವುದನ್ನು ಮುಂದುವರಿಸುತ್ತಾನೆ. ದೇವರು ನಮ್ಮನ್ನು ಪ್ರೀತಿಸುತ್ತಾನೆ, ಮಾನವರನ್ನು ಬಿಟ್ಟುಕೊಡಲಿಲ್ಲ ಹಾಗು ನಮ್ಮ ವರ್ತನೆ ಹೇಗಿದ್ದರೂ ಸಹ ನಮಗೆ ತನ್ನ ಕರುಣೆ ತೋರುವುದನ್ನು ಮುಂದುವರಿಸುತ್ತಾನೆ. ನಾವು ದೇವರ ಪ್ರೀತಿ, ಕೃಪೆ ಮತ್ತು ನಂಬಿಗಸ್ತಿಕೆಯನ್ನು ಆದುಕೊಂಡಿರಬಹುದು.

ನ್ಯೂ ಅಪೊಸ್ಟಾಲಿಕ್ ಚರ್ಚಿನ ಆಂಗ್ಲ ಸಂಗೀತ ಪುಸ್ತಕದಲ್ಲಿರುವ 177ನೇ ಸಂಗೀತವು (ನಮ್ಮ ಸಂಗೀತ ಪುಸ್ತಕದಲ್ಲಿರುವ ಸಂಗೀತ 63), "ಲೆಕ್ಕಿಸೊಂದೊಂದಾಗಿ ಭಾಗ್ಯವ" ಎಂಬುದು, ಎಲ್ಲವೂ ದೇವರಿಂದಲೇ ಬರುವುದು ಮತ್ತು ನಾವು ಸಂಪೂರ್ಣವಾಗಿ ಆತನ ಮೇಲೆ ಆಧಾರಗೊಂಡಿದ್ದೇವೆಂಬ ತಿಳುವಳಿಕೆಯಲ್ಲಿ ನಮಗೊಂದು ಒಳ್ಳೇ ಬುದ್ಧಿವಾದವಾಗಿದೆ. ನಮ್ಮ ಜೀವಿತಗಳು ಪರಸ್ಪರವಾಗಿ ಬಹು ಭಿನ್ನವಾಗಿದ್ದಾಗ್ಯೂ, ನಾವೆಲ್ಲರೂ ಈ ಸೃಷ್ಟಿಯನ್ನು ಹಂಚಿಕೊಳ್ಳುತ್ತೇವೆ, ನಾವೆಲ್ಲರೂ ವರಗಳನ್ನು ಹೊಂದಿರುತ್ತೇವೆ, ಮತ್ತು ನಮ್ಮನ್ನು ಆವರಿಸಿಕೊಂಡಿರುವ ದೇವರ ಪ್ರೀತಿ, ಆತನ ಕೃಪೆ ಹಾಗು ಆತನ ನಂಬಿಗಸ್ತಿಕೆಯನ್ನು ನಾವು ಅನುಭವಿಸುತ್ತೇವೆ. ಇದರ ಜೊತೆಗೆ, ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಜೀವಿತಗಳಲ್ಲಿರುವ ಇನ್ನಿತರ ಅನೇಕ ಆಶೀರ್ವಾದಗಳನ್ನೂ ಎಣಿಸಬಹುದು.

ನಾವು ನಮ್ಮ ತ್ರಯೈಕ ದೇವರನ್ನು ಆರಾಧಿಸುವಾಗ, ನಮ್ಮ ಸ್ತುತಿ, ಆರಾಧನೆ ಮತ್ತು ಕೃತಜ್ಞತೆಯನ್ನು ಆತನ ಬಳಿಗೆ ತರಲು ಪ್ರೇರೇಪಿಸಲ್ಪಡುತ್ತೇವೆ. ನಾವು ನಮ್ಮ ಕಾಣಿಕೆಗಳನ್ನು ತರುವ ಮೂಲಕವೂ, ಸುವಾರ್ತೆ ಸಾರುವ ಕಾರ್ಯಕ್ಕೆ ಬೆಂಬಲ ನೀಡುವ ಮೂಲಕವೂ, ದೇವರ ಕೆಲಸದಲ್ಲಿ ಸೇವೆಮಾಡುವ ಮೂಲಕವೂ, ನಮ್ಮ ನೆರಯವನೊಂದಿಗೆ ಹಂಚಿಕೊಳ್ಳುವ ಮೂಲಕವೂ ಮತ್ತು ಸೃಷ್ಟಿ ಹಾಗು ನಮ್ಮ ಕುಟುಂಬದ ಪ್ರತಿ ಜವಾಬ್ದಾರ ರೀತಿಯಲ್ಲಿ ನಡೆದುಕೊಳ್ಳುವ ಮೂಲಕವೂ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬಹುದು.

ದೀನತೆ, ತಾಳ್ಮೆ, ಪ್ರೀತಿ ಹಾಗು ಕೃತಜ್ಞತೆಯಿಂದ ನಾವು ನಮ್ಮ ನಂಬಿಕೆಯ ಗುರಿಯ ದಿಕ್ಕಿನಲ್ಲಿ: ನಮ್ಮ ಕರ್ತನಾದ ಯೇಸು ಕ್ರಿಸ್ತನ ಪುನರಾಗಮನದ ದಿಕ್ಕಿನಲ್ಲಿ ಮುಂದೆ ಸಾಗುತ್ತೇವೆ.

ಕೆನಾಡಾ ಜಿಲ್ಲೆಯ ಎಲ್ಲಾ ಅಪೊಸ್ತಲರು ಮತ್ತು ಬಿಷಪ್‌ಗಳನ್ನು ಜೊತೆಗೂಡಿ, ನಿಮ್ಮ ಕುಟುಂಬಗಳ ಹಾಗು ಸಭೆಯ ಮಧ್ಯೆ ನಾವು ನಿಮಗೆ ಒಂದು ಆಶೀರ್ವಾದಮಯವಾದ ಕೃತಜ್ಞತಾರ್ಪಣೆಯನ್ನೂ ಮತ್ತು ಅತ್ಯಾನಂದ ಹಾಗು ಸಮಾಧಾನವನ್ನೂ ಹಾರೈಸುತ್ತೇವೆ.

ಮನಃಪೂರ್ವಕವಾಗಿ,

ಮಾರ್ಕ್ ವೊಲ್

**Thanksgiving**
6 October 2024
Kannada